ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ.1780/2024

ಸಿ.ಡಬ್ಲ್ಯೂ -01
ಪಿ.ಡಬ್ಲ್ಯೂ-01

ಸಾಕ್ಷಿದಾರನ ಹೆಸರು :-ಲಕ್ಷ್ಮಿ
ಗಂಡನ ಹೆಸರು :-ಪ್ರಕಾಶ
ವಯಸ್ಸು :-47 ವರ್ಷ
ಉದ್ಯೋಗ :-ಮನೆ ಕೆಲಸ
ವಾಸ :-ಬೆಂಗಳೂರು

**ಸಾಕ್ಷಿಗೆ ದಿಃ 28.07.2026 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಆರೋಪಿ ನನಗೆ ಗೊತ್ತು. ಚಾಸಾ 2 ನನ್ನ ಗಂಡ ಆಗಬೇಕು. ನಾನು ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದು 2017 ರಲ್ಲಿ ಮಂಗಳಾ ಗ್ರಾಮದಲ್ಲಿ ಮರಿಯಪ್ಪ ಅವರಿಂದ ಸರ್ವೆ ನಂ 45/7 ಮತ್ತು 45/8 ರಲ್ಲಿ 1 ಎಕರೆ 34 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದಿದ್ದು ದಾಖಲೆಗಳು ನನ್ನ ಹೆಸರಿಗೆ ಇರುತ್ತವೆ. ಸದರಿ ಜಮೀನನ್ನು ಹದ್ದುಬಸ್ತ ಮಾಡಿಸಿ ಕಲ್ಲುಗಳನ್ನು ನೆಟ್ಟು ತೆಂಗಿನ ಸಸಿಗಳನ್ನು ನೆಟ್ಟು ಬೋರವೇಲ್ ಹಾಕಿಸಿ ವ್ಯವಸಾಯ ಮಾಡುತ್ತಿದ್ದೇವೆ.

ದಿಃ 28.05.2022 ರಂದು ಮದ್ಯಾಹ್ನ 1.30 ರ ಸಮಯದಲ್ಲಿ ನಾನು ಮತ್ತು ಚಾಸಾ 2 ನಮ್ಮ ಜಮೀನಿನಲ್ಲಿ ಕೆಲಸ ಮಾಡುವ ಸಮಯದಲ್ಲಿ ಪಕ್ಕದ ಜಮೀನಿನವರು ಆದ ತಿಮ್ಮೆಗೌಡ ಅವರು ನಮ್ಮ ಜಮೀನಿನ ಸರ್ವೆ ನಂ 45/7 ರಲ್ಲಿ ನೆಟ್ಟಿದ ಕಲ್ಲು ಕಂಬಗಳನ್ನು ಕಿಳುತ್ತಿದ್ದು ನಾನು ಹೋಗಿ ಕೇಳಿದ್ದಕ್ಕೆ ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಅವರಿಗೆ ಜಮೀನು ಖರೀದಿ ಮಾಡಿದಕ್ಕೆ ವೈಷ್ಯಮ್ಯ ಇರುತ್ತದೆ. ನಾನು ಅವರಿಗೆ ಕೇಳಿ ಹೊರಡುವಷ್ಟರಲ್ಲಿ ನನ್ನ ಬೆನ್ನಿಗೆ ಕೈಯಿಂದ ಗುದಿ ಸೀರೆಯನ್ನು ಎಳೆದಾಡಿರುತ್ತಾರೆ.

ಆರೋಪಿಯ ಕೂಡಗೋಲು ಇದ್ದು ನಾನು ಸೀರೆಯನ್ನು ಎಳೆದುಕೊಳ್ಳಲು ಹೋದಾಗ ಸೀರೆ ಸೇರಗು ಅದಕ್ಕೆಸಿಕ್ಕಿ ಹರಿದಿರುತ್ತೇನೆ. ನಾನು ಕಿರುಚಾಡುವ ಶಬ್ದ ಕೇಳಿ ಚಾಸಾ 2 ಅವರು ಅಲ್ಲಿಗೆ ಬಂದು ಏಕೆ ಹೀಗೆ ಮಾಡುತ್ತಿಯಾ ಎಂದು ಕೇಳಿದಕ್ಕೆ ಕೂಡಗೋಲನಿಂದ ನನ್ನ ಗಂಡನ ಎಡಗೈ ತೋರ ಬೆರಳಿಗೆ ಗಾಯ ಮಾಡಿರುತ್ತಾರೆ. ನಂತರ ಅವರು ಧರಿಸಿದ ಬನಿಯನ್ ಹಿಡಿದು ಎಳೆದಾಡಿ ಹರಿದು ಹಾಕಿರುತ್ತಾರೆ. ನಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಚಾಸಾ 3 ಮತ್ತು 4 ಬಂದು ಸಮಾಧಾನ ಮಾಡಿದ್ದು ಆಗ ಆರೋಪಿ ನೀನು ಮತ್ತು ನಿನ್ನ ಗಂಡ ಜಮೀನಿನ ಬಳಿ ಬಂದರೆ ಜೀವ ಸಹಿತ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿ ಕೂಡಗೋಲನ್ನು ಅಲ್ಲಿಯೇ ಬಿಸಾಡಿ ಹೋಗಿರುತ್ತಾನೆ. ನಂತರ ನಾನು ನನ್ನ ಗಂಡನನ್ನು ಅಮೃತೂರು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೇನೆ.

ನಾನು ಗಾಬರಿ ಆಗಿ ಇದ್ದ ಕಾರಣ ಆ ದಿನ ದೂರನ್ನುನೀಡಿರುವುದಿಲ್ಲ ಮಾರನೇ ದಿನ ದೂರನ್ನು ನೀಡಿರುತ್ತೇನೆ. ಸದರಿ ದೂರಿಗೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 1 ಎಂದು ಸಹಿ ನಿ.ಪಿ 1(ಎ) ಎಂದು ಗುರುತಿಸಲಾಯಿತು. ದಿಃ 29.05.2022 ರಂದು 12.30 ರಿಂದ 1.30ರ ಸಮಯದಲ್ಲಿ ಪೋಲಿಸರು ಸ್ಥಳಕ್ಕೆ ಬಂದು ಚಾಸಾ 5 ಮತ್ತು 6 ಅವರ ಸಮಕ್ಷಮ ಮಹಜರ ಮಾಡಿರುತ್ತಾರೆ. ಸದರಿ ಮಹಜರ ಸಮಯದಲ್ಲಿ ನಾನು ಸ್ಥಳವನ್ನುತೋರಿಸಿದ್ದು ಸೀರೆ ಬನಿಯನ್ ಮತ್ತು ಕೂಡಗೋಲನ್ನು ಜಪ್ತು ಮಾಡಿಕೊಂಡು ಬಂದಿರುತ್ತಾರೆ. ಸದರಿ ಮಹಜರಗೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 2 ಎಂದು ಸಹಿ ನಿಪಿ 2(ಎ) ಎಂದು ಗುರುತಿಸಲಾಯಿತು. ಮು. ಮಾ. ಗಳನ್ನು ಗುರುತಿಸುತ್ತೇನೆ.

ದಿಃ 18.06.2022 ರಂದು ನಾನು ನ್ಯಾಯಾಧೀಶರ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಸದರಿ ಹೇಳಿಕೆಯನ್ನು ನಿ.ಪಿ 3 ಎಂದು ಗುರುತಿಸಲಾಯಿತು. ಮು. ಮಾ. ಗಳನ್ನು ಒಟ್ಟಾರೆಯಾಗಿ ಮು. ಮಾ. 1 ರಿಂದ 3 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರಃ ವಾಯ್. ಆರ್. ಹೆಚ್ ವಕೀಲರಿಂದಃ**

ನಾನು ದ್ವಿತಿಯ ಪಿ.ಯು.ಸಿ ವಿದ್ಯಾಬ್ಯಾಸ ಮಾಡಿರುತ್ತೇನೆ. ನನ್ನ ಗಂಡನ ದ್ವಿತಿಯ ಪಿ.ಯು.ಸಿಯವರೆಗೆ ವಿದ್ಯಾಬ್ಯಾಸ ಮಾಡಿರುತ್ತಾರೆ ನನ್ನ ಮಕ್ಕಳು ಸಹ ವಿದ್ಯಾವಂತರಾಗಿರುತ್ತಾರೆ. ಯಾವುದಾದರೂ ಘಟನೆ ಆದಲ್ಲಿ ತಕ್ಷಣವೇ ಆನ್ ಲೈನ್ ಮೂಲಕ ಅಥವಾ ಹಾಜರಾಗಿ ದೂರನ್ನು ನೀಡಬೇಕೆಂಬ ವಿಚಾರ ನನಗೆ, ನನ್ನ ಗಂಡನಿಗೆ ಮತ್ತು ಮಕ್ಕಳಿಗೆ ಗೊತ್ತು. ನಾನು ಖಾಯಂ ಆಗಿ ಬೆಂಗಳೂರು ವಾಸಿ ಆಗಿರುತ್ತದೆ. ಮಂಗಳಾ ಗ್ರಾಮದಲ್ಲಿ ವಾಸ ಮಾಡುತ್ತಿಲ್ಲ.

ಘಟನೆಗೂ ಮೊದಲು ನನಗೆ ಅಮೃತೂರಿನಲ್ಲಿರುವ ಠಾಣೆ ಮತ್ತು ಆಸ್ಪತ್ರೆಯ ಬಗ್ಗೆ ಗೊತ್ತಿತ್ತು. ದಿನಾಂಕ 28.05.2022ರ ಮೊದಲು 2 ಬಾರಿ ನಾವು ಜಮೀನು ವಿಚಾರವಾಗಿ ಪೋಲಿಸ ಠಾಣೆಗೆ ಹೋಗಿರುತ್ತೇವೆ. ಸರ್ವೆ ನಂ 45/7 ಮತ್ತು 45/8ರ ಜಮೀನಿನ ದುರಸ್ತಿ ವಿಚಾರವಾಗಿ ನಮ್ಮ ಮತ್ತು ಆರೋಪಿ ನಡುವೆ ದ್ವೇಷ ಇರುತ್ತದೆ ಎಂದರೆ ಸರಿ. ದಿನಾಂಕ 28.05.2022 ರ ಮೊದಲು ಹದ್ದುಬಸ್ತ ಮಾಡಿ ಕಲ್ಲು ಕಂಬಗಳನ್ನು ನೆಟ್ಟ ಸಮಯದಲ್ಲಿ ಆರೋಪಿಗೆ ನೋಟಿಸ್ ಜಾರಿ ಆಗಿರಲಿಲ್ಲ ಅವರು ಹದ್ದುಬಸ್ತ ಸಮಯದಲ್ಲಿ ಅವರು ಹಾಜರು ಇರಲಿಲ್ಲವೆಂದರೆ ಸಾಕ್ಷಿ ನೋಟಸ್ ಜಾರಿ ಆಗಿತ್ತು ಅವರು ಹಾಜರಿದ್ದರಾ ಇಲ್ಲವಾ ಎಂದು ಗೊತ್ತಿಲ್ಲವೆಂದು ಹೇಳುತ್ತಾರೆ.

ನೋಟಿಸ್ ಜಾರಿ ಆಗಿದೆ ಎಂದು ಹೇಳುವ ಸಮಯದಲ್ಲಿ ಆರೋಪಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದು ಅಲ್ಲಿಯೇ ವಾಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಅವರ ತಾಯಿಗೆ ಜಾರಿ ಮಾಡಿರುತ್ತಾರೆಂದು ಹೇಳುತ್ತಾರೆ. ದಿನಾಂಕ 28.05.2022ರಲ್ಲಿ ಆರೋಪಿ ಇನ್ನೂ ಪೋಲಿಸ ಇಲಾಖೆಯಲ್ಲಿ ಕೆಲಸದಲ್ಲಿದ್ದರು ಎಂದರೆ ಸರಿ. ಹದ್ದುಬಸ್ತ ಮಾಡುವ ಸಮಯದಲ್ಲಿ ನೋಟಿಸ್ ಆರೋಪಿಗೆ ಮತ್ತು ಅವರ ಕುಟುಂಬದವರಿಗೆ ಜಾರಿ ಆಗಿತ್ತೆಂದು ತೋರಿಸಲು ಪೋಲಿಸರಿಗೆ ದಾಖಲೆಯನ್ನು ನೀಡಿರುತ್ತೇನೆ. ನಾನು ಕೊಟ್ಟಿರುವ ದಾಖಲೆಗಳ ಪ್ರಕಾರ ಆರೋಪಿ ಕುಟುಂಬದವರು ನಮ್ಮ ಜಮೀನು ಒತ್ತು ಮಾಡಿರುವ ಬಗ್ಗೆ ನಮೂದು ಇರುತ್ತದೆ.

ಘಟನೆ ಆಗುವ ಮೊದಲೇ ಆರೋಪಿ ಕುಟುಂಬದವರು ಒತ್ತುವರಿ ಮಾಡಿರುವ ಬಗ್ಗೆ ಇರುವ ನಕ್ಷೆಯನ್ನು ನಾನು ಪೊಲೀಸರಿಗೆ ನೀಡಿರುತ್ತೇನೆ. 2019 ರಿಂದ ಇಲ್ಲಿಯವರೆಗೂ ಒತ್ತುವರಿ ಆಗಿದೆ ಎಂದು ಹೇಳುವ ಜಾಗವನ್ನು ಬಿಡಿಸಿಕೊಳ್ಳುವ ಕುರಿತು ದಾವೆಯನ್ನು ದಾಖಲು ಮಾಡಿರುವುದಿಲ್ಲ. ಒತ್ತುವರಿ ಆಗಿದೆ ಎಂದು ಹೇಳುವ ಜಾಗವನ್ನು ಬಿಡಿಸಿಕೊಳ್ಳುವ ಕುರಿತು ಠಾಣೆಗೆ ದೂರನ್ನು 2019 ರಲ್ಲಿ ನೀಡಿದ್ದು ನಂತರದಲ್ಲಿ ನೀಡಿರುವುದಿಲ್ಲ. 2019 ರಲ್ಲಿ ದೂರನ್ನು ನೀಡಿದ ಸಮಯದಲ್ಲಿ ಎಫ್.ಐ.ಆರ್ ದಾಖಲು ಆಗಿರುತ್ತದೆ. ಆದಾದ ನಂತರ ನಾನು ನಮ್ಮ ಜಮೀನಿನ ಹದ್ದುಬಸ್ತನ್ನು ಎ.ಡಿ.ಎಲ್.ಆರ್ ಮತ್ತು ಡಿಡಿಎಲ್ಆರ್ ಅವರ ಕಡೆಯಿಂದ ಮಾಡಿರುವುದಿಲ್ಲ.

2019 ರಲ್ಲಿ ಕಲ್ಲು ಕಂಬಗಳನ್ನು ಕಿತ್ತು ಹಾಕಿದ ಬಳಿಕ ಪುನಃ ಅಳತೆ ಮಾಡಿ ಕಲ್ಲು ಕಂಬಗಳನ್ನು ಹಾಕಿರುವುದಿಲ್ಲ. 2019 ರಲ್ಲಿ ಕಲ್ಲು ಕಂಬಗಳನ್ನು ಕಿತ್ತು ಹಾಕಿದ್ದು ದೂರನ್ನು ನೀಡಿದ ಬಗ್ಗೆ ನಿ.ಪಿ 1 ರಲ್ಲಿ ನಮೂದು ಇಲ್ಲವೆಂದರೆ ಸರಿ. 2019 ರಲ್ಲಿ ಗಲಾಟೆ ಆದಾಗ ಅದೆ ದಿನ ದೂರನ್ನು ನೀಡಿದ್ದೀರಾ ಎಂದರೆ ಸಾಕ್ಷಿ ಮಾರನೇ ದಿನ ನೀಡಿದ್ದೇನೆಂದು ಹೇಳುತ್ತಾರೆ. ದಿನಾಂಕ 28.05.2022 ರಂದು ದೂರನ್ನು ನೀಡಲು ಯಾವುದೇ ತೊಂದರೆ ಇರಲಿಲ್ಲವೆಂದರೆ ಸಾಕ್ಷಿ ನಾನು ಗಾಬರಿ ಆಗಿದ್ದೇ ಎಂದು ಹೇಳುತ್ತಾರೆ.

ಗಲಾಟೆ ಆಗಿದೆ ಎಂದು ಹೇಳುವ ದಿನ ನಾವು ಬೆಂಗಳೂರಿಗೆ ಹೋಗಿರಲಿಲ್ಲ. ದೂರಿನಲ್ಲಿ ಸರ್ವೆ ನಂ 45/7 ಮತ್ತು 45/8 ರಲ್ಲಿ ಮನೆ ಇರುವ ಬಗ್ಗೆ ಹೇಳಿಲ್ಲ ಮತ್ತು ಮನೆ ಇರುವ ಬಗ್ಗೆ ದಾಖಲೆ ನೀಡಿಲ್ಲವೆಂದರೆ ಸರಿ. ದಿಃ 29.05.2022 ರಂದು ನಾನು 930 ರ ಸಮಯದಲ್ಲಿ ಠಾಣೆಗೆ ಹೋಗಿರುತ್ತೇನೆ. ದೂರನ್ನು ನಾನು ಮೊದಲು ಮನೆಯಲ್ಲಿ ಬರೆದುಕೊಂಡು ಹೋಗಿದ್ದೆ. ನಾನು ನೀಡಿದ ದೂರಿನಲ್ಲಿ ಯಾವುದಾದರೂ ಬರವಣಿಗೆಯನ್ನು ವೈಟ್ನರ್ ಹಾಕಿ ಬರೆದ ಬಗ್ಗೆ ಇರುವುದಿಲ್ಲ. ಸರ್ವೆ ನಂ 45/7ರ ಉತ್ತರಕ್ಕೆ ಆರೋಪಿಯ ಜಮೀನು ಇರುತ್ತದೆ.

ದಿಃ 28.05.2022 ರಂದು ಶನಿವಾರ ಇರುತ್ತದೆ. ನಾವು ಬೆಂಗಳೂರಿನಿಂದ ಶನಿವಾರ ಮತ್ತು ಬಾನುವಾರ ಬಂದು ಹೋಗಿ ಮಾಡುತ್ತೇವೆ ಬೇರೆ ದಿನ ಬರುವುದಿಲ್ಲ. ನನಗೆ ಹಲ್ಲೆ ಆದ ಸಂಬಂದ ಯಾವುದೇ ಚಿಕಿತ್ಸೆ ಪಡೆದಿಲ್ಲ. ನನಗೆ ಯಾವುದೇ ಹಲ್ಲೆ ಆಗದೇ ಇರುವ ಕಾರಣ ನಾನು ಚಿಕಿತ್ಸೆ ಪಡೆದಿಲ್ಲವೆಂದರೆ ಸರಿ. ನನ್ನ ಗಂಡನನ್ನು ನಾನೇ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ವೈದ್ಯರಿಗೆ ನನ್ನ ಗಂಡನನ್ನು ನಾನೇ ಕರೆದುಕೊಂಡು ಬಂದಿರುತ್ತೇನೆಂದು ಬರೆಸಿರುವುದಿಲ್ಲ. ನನ್ನ ಗಂಡನಿಗೆ ದೂರನ್ನು ನೀಡಲು ತೊಂದರೆ ಇರಲಿಲ್ಲವೆಂದರೆ ಸರಿ.

ನಾನು ನೀಡಿರುವ ದಾಖಲೆಗಳ ಪ್ರಕಾರ ಘಟನೆ ಆಗಿದೆ ಎಂದು ಹೇಳುವ ಜಾಗ ನಮಗೆ ಸೇರಿರುತ್ತದೆ. ಒತ್ತುವರಿ ಆಗಿದೆ ಎಂದು ಹೇಳುವ ಜಾಗದಲ್ಲಿಯೇ ಘಟನೆ ಆಗಿರುತ್ತದೆ. ಒತ್ತುವರಿ ಆಗಿದೆ ಎಂದು ಹೇಳುವ ಜಾಗದಲ್ಲಿ ತೆಂಗು ಇರುತ್ತದೆ. ಸದರಿ ತೆಂಗಿನ ವಯಸ್ಸು ನನಗೆ ಗೊತ್ತಿಲ್ಲ. ನಾನು ಪೊಲಿಸರಿಗೆ ಒತ್ತುವರಿ ಆದ ಜಾಗದ ಪೋಟೋಗಳನ್ನು ನೀಡಿರುತ್ತೇನೆ. ಸಾಕ್ಷಿಗೆ ಅಂತಿಮ ವರದಿಯೊಂದಿಗೆ ಪುಟ 35 ರಲ್ಲಿ ಸಲ್ಲಿಸಿರುವ 3ನೇ ಪೋಟೋವನ್ನು ತೋರಿಸಿ ಅದರಲ್ಲಿರುವ ತೆಂಗಿನ ಸಸಿ ಆರೋಪಿಯದ್ದು ಇರುತ್ತದೆ ಮತ್ತು ಅದರ ಹಿಂದಿನ ಜಾಗ ನಿಮ್ಮದು ಇರುತ್ತದೆ ಎಂದು ಕೇಳಲಾಗಿ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ **ಪೋಟೋವನ್ನು ನಿ.ಡಿ 1 ಎಂದು ಗುರುತಿಸಲಾಯಿತು**. ಅಂತಿಮ ವರದಿಯಲ್ಲಿ ಕಾಣುವ ಪುಟ 34 ರ ಪೋಟೋವನ್ನು ಅದೇ ದಿನ ತಗೆದಿರುತ್ತೇವೆ.

ದಿನಾಂಕ 09.02.2022ರಲ್ಲಿ ಆರೋಪಿ ತೆಂಗಿನ ಮರಕ್ಕೆ ನೀರು ಹಾಯಿಸುವ ಸಮಯದಲ್ಲಿ ನನ್ನ ಗಂಡ ಮತ್ತು ನಾನು ಗಲಾಟೆ ಮಾಡಿದ ವಿಚಾರಕ್ಕೆ ಆರೋಪಿ ದೂರನ್ನು ನೀಡಿದ್ದು ನಾವು ಠಾಣೆಗೆ ಹಾಜರಾಗಿದ್ದೇವು ಎಂದರೆ ಸಾಕ್ಷಿ ನನಗೆ ನೆನಪಿಲ್ಲವೆಂದು ಹೇಳುತ್ತಾರೆ. ಸದರಿ ದಿನಾಂಕದಂದು ನಾನಾಗಲಿ ನನ್ನ ಗಂಡನಾಗಲಿ ದೂರು ನೀಡಿದ ಬಗ್ಗೆ ನನಗೆ ನೆನಪಿಲ್ಲವೆಂದು ಹೇಳುತ್ತಾರೆ.

ದಿಃ 19.06.2019 ರಂದು ಡಿಡಿಎಲ್‌ಆರ್ ಅವರು ದುರಸ್ತಿ ಪೋಡಿಯನ್ನು ರದ್ದು ಮಾಡಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲವೆಂದು ಹೇಳುತ್ತಾರೆ. ಸದರಿ ವಿಚಾರ ನನಗೆ ಗೊತ್ತು ಇರುತ್ತದೆ ದಿನಾಂಕ 19.10.2019 ರಂದು ನಾವು ಪುನಃ ಅರ್ಜಿ ನೀಡಿ ಅಳತೆ ಮಾಡಿಸಿರುತ್ತೇವೆ ಎಂದರೆ ಸರಿ. ಆ ಸಮಯದಲ್ಲಿ ಆರೋಪಿ ಮತ್ತು ಅವರ ಕುಟುಂಬದವರಿಗೆ ನೋಟಿಸ ನೀಡಿದ್ದು ಅವರು ಹಾಜರು ಇರಲಿಲ್ಲ.

ದಿನಾಂಕ 28.05.2022 ರಂದು ಆರೋಪಿ ಗ್ರಾಮಕ್ಕೆ ಬಂದಿರಲಿಲ್ಲ ನಾವು ಅವರ ಕೆಲಸಕ್ಕೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ನಾನು ನನ್ನ ದೂರಿನಲ್ಲಿ ಹೇಳಿರುವಂತೆ ನಾವು ಕೆಲಸ ಮಾಡುತ್ತಿರಲಿಲ್ಲ ಆರೋಪಿ ನಮ್ಮ ಜಮೀನಿಗೆ ಬಂದು ಕಲ್ಲನ್ನು ಕಿತ್ತು ಹಾಕಿಲ್ಲ ನಮ್ಮ ಜಮೀನಿನಲ್ಲಿ ಹದ್ದಬಸ್ತ ಕಲ್ಲು ಇರಲಿಲ್ಲವೆಂದರೆ ಸರಿಯಲ್ಲ. ಆ ದಿನ ಆರೋಪಿ ಸ್ಥಳಕ್ಕೆ ಬಾರದೆ ಇರುವ ನನಗೆ ಮತ್ತು ನನ್ನ ಗಂಡನಿಗೆ ಹಲ್ಲೆ ಮಾಡುವ ಪ್ರಶ್ನೆ ಬರುವುದಿಲ್ಲವೆಂದರೆ ಸರಿಯಲ್ಲ.

ಸದರಿ ದಿನಾಂಕದಂದು ನಾನು ನ್ಯಾಯಾಲಯದ ಮುಂದೆ ಇರುವ ಮು. ಮಾ. ಸೀರೆಯನ್ನು ಧರಿಸಿರಲಿಲ್ಲ ಅದಕ್ಕೂ ಪ್ರಕರಣಕ್ಕೂ ಆರೋಪಿಗೂ ಸಂಬಂದ ಇಲ್ಲವೆಂದರೆ ಸರಿಯಲ್ಲ. ನಾನು ಹೇಳುವ ಜಾಗಕ್ಕೂ ರಸ್ತೆಗೂ ಎಷ್ಟು ದೂರ ಇದೆ ಎಂದರೆ ಸಾಕ್ಷಿ ಅಲ್ಲಿ ಯಾವುದೇ ರಸ್ತೆ ಇರುವುದಿಲ್ಲವೆಂದು ಹೇಳುತ್ತಾರೆ. ನಮ್ಮ ಜಮೀನಿನ ಯಾವ ದಿಕ್ಕಿಗೂ ರಸ್ತೆ ಇರುವುದಿಲ್ಲ. ಚಾಸಾ 4 ಅವರು 8-9 ವರ್ಷಗಳಿಂದ ನಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಾರೆ. ಚಾಸಾ 3 ನನ್ನ ಸಂಬಂಧಿ ಆಗಿರುತ್ತಾರೆ. ಅವರು ಸದರಿ ದಿನದಂದು ಪೊಲಿಸ ಠಾಣೆಗೆ ಬಂದಿದ್ದರು.

ಮಹಜರ ಮಾಡುವ ಸಮಯದಲ್ಲಿ ನೋಟಿಸ್ ಅನ್ನು ನೀಡಿರಲಿಲ್ಲ. ಮಹಜರನ್ನು ಚಾಸಾ 5 ಮತ್ತು 6 ಅವರು ಹೇಳಿ ಬರೇಸಿರುವುದಿಲ್ಲ. ದಿನಾಂಕ 29.05.2022 ರಂದು ಸ್ಥಳಕ್ಕೆ ಹೋದಾಗ ಮ. ಮಾ. ಗಳ ಸ್ಥಳದಲ್ಲಿ ಇರಲಿಲ್ಲವೆಂದರೆ ಸಾಕ್ಷಿ ಕೂಡಗೋಲ ಮಾತ್ರ

ಸ್ಥಳದಲ್ಲಿತ್ತು ಎಂದು ಹೇಳುತ್ತಾರೆ. ಕೂಡಗೋಲಗೆ ನನ್ನ ಸಹಿಪಡೆದಿರುವುದಿಲ್ಲ. ಆ ದಿನ ನನ್ನ ಗಂಡ ಸ್ಥಳದಲ್ಲಿ ಇರಲಿಲ್ಲ ಪೋಲಿಸ ಠಾಣೆಯಲ್ಲಿದರು ಎಂದು ಹೇಳುತ್ತಾರೆ. ಮಹಜರನ ಬರವಣಿಗೆ ಸ್ಥಳದಲ್ಲಿ ಬರೆದಿರುತ್ತಾರೆ. ಮಹಜರ ಸಮಯದಲ್ಲಿ ಪೋಟೋ ತಗೆದಿರುವುದಿಲ್ಲ. ಮಹಜರನ ಬರವಣಿಗೆಯನ್ನು ದೂರನ್ನು ನೋಡಿ ಬರೆದಿರುತ್ತಾರೆ.

ದಿನಾಂಕ 09.02.2022 ರಂದು ಆರೋಪಿ ನಮ್ಮ ವಿರುದ್ದ ಎಸ್.ಪಿ, ಡಿ.ವೈ.ಎಸ್ ಪಿ ಮತ್ತು ವಿ.ಐ ಅವರಿಗೆ ದೂರನ್ನು ನೀಡಿದ್ದು ಸದರಿ ವಿಚಾರವಾಗಿ ಪೋಲಿಸ ಠಾಣೆಗೆ ನಮ್ಮನ್ನು ಕರೆಸಿದ್ದರು ಎಂದರೆ ಸರಿ. ಪೋಲಿಸರು ನಮ್ಮ ಮೇಲೆ ಯಾವುದೇ ಪ್ರರಕಣ ದಾಖಲಿಸಿಕೊಂಡಿರುವುದಿಲ್ಲ. ನ್ಯಾಯಾಲಯಕ್ಕೆ ಹೋಗುವಂತೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದೂರನ್ನು ಆರೋಪಿ ಎಸ್.ಪಿ ಯ ಮೇಲೆ ಸಹ ನೀಡಿದ್ದು ನಂತರ 3 ತಿಂಗಳ ಬಳಿಕ ನಾವು ಮತ್ತು ಪೋಲಿಸರು ಸೇರಿಕೊಂಡು ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

ಉದ್ದೇಶಪೂರ್ವಕವಾಗಿ ಪೊಲಿಸರು ನಮ್ಮ ಕಡೆಯಿಂದ ದೂರನ್ನು ಪಡೆದು ಅದೇ ದಿನ ಮಹಜರನ್ನು ಠಾಣೆಯಲ್ಲಿ ಸೃಷ್ಟಿ ಮಾಡಿರುತ್ತಾರೆಎಂದರೆ ಸರಿಯಲ್ಲ. ನಾನು ಹೇಳುವ ಗಾಯಕ್ಕೂ ಮತ್ತು ವೈದ್ಯರು ನೀಡಿರುವ ಗಾಯದ ಪ್ರಮಾಣ ಪತ್ರದಲ್ಲಿ ತೋರಿಸಿರುವ ಗಾಯಕ್ಕೂ ವ್ಯತ್ಯಾಸ ಇದೆ ಎಂದರ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹಲ್ಲೆಯ ಬಗ್ಗೆ ಕೊಲೆ ಬೆದರಿಕೆ ಹಾಕಿರುವ ವಿಚಾರ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಆರೋಪಿಗೂ ಮತ್ತು ಮು. ಮಾ. ಗೂ ಯಾವುದೇ ಸಂಬಂದ ಇಲ್ಲವೆಂದರೆ ಸರಿಯಲ್ಲ. ಅತಿಕ್ರಮ ಪ್ರವೇಶ ಮಾಡಿದ್ದಾರೆಂದು ಹೇಳುವ ಜಾಗ ಆರೋಪಿಗೆ ಸೇರಿದ್ದು ಆರೋಪಿಯ ಮೇಲಿನ ದ್ವೇಷದಿಂದ ಸುಳ್ಳು ದೂರನ್ನು ದಾಖಲಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.